<u>ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.</u>

ಸಿ.ಸಿ. ನಂಃ 609/2015 ಸಿಡಬ್ಲೂ : 15 ಪಿಡಬ್ಲೂಃ 6

ಪ್ರಮಾಣವಚನ ಬೋಧಿಸಲಾಯಿತು ದಿಃ 05-06-2025

ಹೆಸರು : ಬಾಪೂ ಗೌಡ

ತಂದೆ ಹೆಸರು : ಸಿದ್ದನ ಗೌಡ ಪಾಟೀಲ್

ವಯಸ್ಸು : 40 ವರ್ಷ

ಉದ್ಯೋಗ : ಸಿ ಪಿ ಐ ಸಂಚಾರಿ ಪೋಲೀಸ್ ಠಾಣೆ ಬಿದರ್

ವಾಸಸ್ಥಳ : ಬೀದರ್

**: ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ :**

ನಾನು ದಿ.01-10-2014 ರಿಂದ 08-06-2016 ವರೆಗೆ ಸೇಡಂ ಪೊಲೀಸ್ ಠಾಣೆಯಲ್ಲಿ ಪಿ ಎಸ್ ಐ ಎಂದು ಕರ್ತವ್ಯ ನಿರ್ವಹಿಸಿರುತ್ತೇನೆ.

ಹೀಗಿರುವಾಗ ನಾನು ದಿಃ 25-02-2015 ರಂದು ಸರ್ಕಾರಿ ಆಸ್ಪೆರ ಸೇಡಂ ನಿಂದ ದೂರವಾಣಿ ಮುಖಾಂತರ ಎಂ ಎಲ್ ಸಿ ಬಂದ ಮೇರೆಗೆ ಕೂಡಲೆ ಆಸ್ಪತ್ರೆಗೆ ಭೇಟಿ ನೀಡಿ ಪಿರ್ಯಾದುದಾರರಾದ ಚಾ ಸಾ 1 ರವರ ಹೇಳಿಕೆಯನ್ನು ಪಡೆದುಕೊಂಡು ಸದರಿ ಹೇಳಿಕೆಯ ಸಾರಾಂಶದ ಮೇರೆಗೆ ನಮ್ಮ ಠಾಣಾ ಗುನ್ನೆ ಕ್ರಮಾಂಕ 37/15 ಪ್ರಕಾರ ಪ್ರ ವ ವರದಿಯನ್ನು ದಾಖಲಿಸಿಕೊಂಡು ಮಾನ್ಯ ನ್ಯಾಯಾಲಯಕ್ಕೆ ಹಾಗೂ ಮೆಲಧಿಕಾರಿಗಳಿಗೆ ಕಳುಹಿಸಿರುತ್ತೇನೆ. ಸಾಕ್ಷಿಯು ಸದರಿ ದೂರನ್ನು ನೋಡಿ ಈಗ ಗುರುತಿಸಿದ್ದು ಅದನ್ನು ಈಗಾಗಲೆ ನಿ ಪಿ 1 ಎಂದು ಗುರುತಿಸಲಾಗಿಗೆ ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ ಪಿ 1(ಸಿ) ಎಂದು ಗುರುತಿಸಲಾಯಿತು. ಅದೇ ರೀತಿ ಪ್ರ ವ ವರದಿಯನ್ನು ನಿ ಪಿ 5 ಎಂದು ಹಾಗೂ ಅದರಲ್ಲಿ ಸಾಕ್ಷಿಯ ಸಹಿಯನ್ನು ನಿ ಪಿ 5(ಎ) ಎಂದು ಗುರುತಿಸಲಾಯಿತು.

ನಂತರ ಅದೇ ದಿನ ಪಂಚರಾದ ಚಾ ಸಾ 4 ಮತ್ತು 5 ರವರ ಸಮಕ್ಷಮದಲ್ಲಿ ಸರ್ಕಾರಿ ಆಸ್ಪತ್ರೆಯಲ್ಲಿರುವ ಶವ ಗೃಹದಲ್ಲಿ ರಾತ್ರಿ 10-30 ರಿಂದ 11-30 ಗಂಟೆಯ ವರೆಗೆ ಮೃತ ಮಹಾನಂದ ರವರ ಶವ ಪಂಚನಾಮೆಯನ್ನು ಜರುಗಿಸಿರುತ್ತೇನೆ. ಸಾಕ್ಷಿಯು ಸದರಿ ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿ ಪಿ 6 ಎಂದು ಗುರುತಿಸಲಾಯಿತು. ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ ಪಿ 6(ಎ ಮತು ಬಿ ) ಎಂದು ಗುರುತಿಸಲಾಯಿತು. ದಿ.26-02-2015 ರಂದು ಘಟನಾ ಸ್ಥಳಕ್ಕೆ ಭೇಟಿ ನೀಡಿ ಚಾ ಸಾ 2 ಮತ್ತು 3 ರವರ ಸಮಕ್ಷಮ ಗುನ್ನೆ ಸ್ಥಳದ ಪಂಚನಾಮೆಯನ್ನು ಬೆಳಿಗ್ಗೆ 06-45 ರಿಂದ 07-45 ಗಂಟೆಯ

ವರೆಗೆ ಜರುಗಿಸಿ ಘಟನಾ ಸ್ಥಳದಿಂದ ಒಂದು ಮೋಟಾರು ಸೈಕಲ್ ನಂ. ಕೆ ಎ 32-ಇ ಡಿ 0712 ನೇದ್ದನ್ನು ಮತ್ತು ಅಶೋಕ್ ಲೈಲ್ಯಾಂಡ್ ಲಾರಿ. ಎಂ ಎಚ್ 12 ಎಚ್ ಡಿ 4724 ನೇದ್ದನ್ನು ವಶಕ್ಕೆ ಪಡೆದುಕೊಂಡಿರುತ್ತೇನೆ. ಸಾಕ್ಷಿಯು ಸದರಿ ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೆ ನಿ ಪಿ 4 ಎಂದು ಗುರುತಿಸಲಾಗಿದೆ ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ ಪಿ 4(ಸಿ) ಎಂದು ಗುರುತಿಸಲಾಯಿತು. ನಂತರ ದಿ.29-02-2015 ರಂದು ಸದರಿ ಪ್ರಕರಣದ ಕಡತವನ್ನು ಮುಂದಿನ ತನಿಕೆಗಾರಿ ಚಾ ಸಾ 17 ರವರಿಗೆ ವಹಿಸಿಕೊಟ್ಟಿರುತ್ತೇನೆ.

**ಪಾಟೀಸವಾಲುಃ** ಆರೋಪಿ ಪರ ಶ್ರೀ ಸಿ ಬಿ ವಕೀಲರಿಂದ ಃ

ದಿಃ 25-02-2015 ರಂದು ಸರ್ಕಾರಿ ಆಸ್ಪತ್ರೆ ಸೇಡಂ ನಿಂದ ದೂರವಾಣಿ ಮುಖಾಂತರ ಯಾವ ವೈಧ್ಯಾಧಿಕಾರಿ ಮಾಹಿತಿ ತಳಿಸಿರುತ್ತಾರೆ ಎಂದರೆ ಸಾಕ್ಷಿಯ ನನಗೆ ಹೆಸರು ಗೊತ್ತಿಲ್ಲ ಎಂದು ನುಡಿಯುತ್ತಾರೆ. ಚಾ ಸಾ 1 ರವರ ಹೇಳಿಕೆಯನ್ನು ಪೊಲೀಸ್ ಠಾಣೆಯಲ್ಲಿಯೇ ಪಡೆದುಕೊಂಡಿರುತ್ತೇನೆ ಎಂದರೆ ಸರಿಯಿಲ್ಲ. ಚಾ ಸಾ 1 ರವರ ಹೇಳಿಕೆಯನ್ನು ಪಡೆದುಕೊಂಡು ಸದರಿ ಹೇಳಿಕೆಯ ಸಾರಾಂಶದ ಮೇರೆಗೆ ನಮ್ಮ ಠಾಣಾ ಗುನ್ನೆ ಕ್ರಮಾಂಕ 37/15 ಪ್ರಕಾರ ಪ್ರ ವ ವರದಿಯನ್ನು ದಾಖಲಿಸಿಕೊಂಡು ಮಾನ್ಯ ನ್ಯಾಯಾಲಯಕ್ಕೆ ಹಾಗೂ ಮೆಲಧಿಕಾರಿಗಳಿಗೆ ಕಳುಹಿಸಿರುತ್ತೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ಆರೋಪಿಯ ವಿರುದ್ದ ಯಾವುದೇ ಸಾಕಕ್ಷು ಸಾಕ್ಷಾದಾರ ಇರದೇ ಇದ್ದರೂ ಸಹ ಆತನ ವಿರುದ್ದ ಪ್ರ ವ ವರದಿಯನ್ನು ದಾಖಲಿಸಿಕೊಂಡು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಿಲ್ಲ. ನಾನು ಗುನ್ನೆ ಸ್ಥಳದ ಪಂಚನಾಮೆಯನ್ನು ಮಾಡಿ ವಾಹನಗಳನ್ನು ವಶಕ್ಕೆ ಪಡೆದುಕೊಂಡಿರುವ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ.

ನಂತರ ಅದೇ ದಿನ ಪಂಚರಾದ ಚಾ ಸಾ 4 ಮತ್ತು 5 ರವರ ಸಮಕ್ಷಮದಲ್ಲಿ ಸರ್ಕಾರಿ ಆಸ್ಪತ್ರೆಯಲ್ಲಿರುವ ಶವ ಗೃಹದಲ್ಲಿ ರಾತ್ರಿ 10-30 ರಿಂದ 11-30 ಗಂಟೆಯ ವರೆಗೆ ಮೃತ ಮಹಾನಂದ ರವರ ಶವ ಪಂಚನಾಮೆಯನ್ನು ಜರುಗಿಸಿರುತ್ತೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ನಂತರ ದಿ.29-02-2015 ರಂದು ಸದರಿ ಪ್ರಕರಣದ ಕಡತವನ್ನು ಮುಂದಿನ ತನಿಕೆಗಾರಿ ಚಾ ಸಾ 17 ರವರಿಗೆ ವಹಿಸಿಕೊಟ್ಟಿರುತ್ತೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ.

ಮರುವಿಚಾರಣೆಃ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ. ಇದೆ.**

**ಪ್ರ. ದ. ನ್ಯಾ. ದಂ.**
**ಸೇಡಂ.**